# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 204 / 2017

ಸಿಡಬ್ಲ್ಯೂ- 02
ಪಿಡಬ್ಲ್ಯೂ-01

ದಿನಾಂಕಃ **07.11.2024.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಮಲ್ಲಿಕಾರ್ಜುನ |
| ತಂದೆಯ/ಗಂಡನ ಹೆಸರುಃ | - | ಜಕ್ಕಪ್ಪ |
| ವಯಸ್ಸುಃ | -? | 42 ವರ್ಷ |
| ಉದ್ಯೋಗಃ | - | ವ್ಯಪಾರ. |
| ವಾಸಸ್ಥಳಃ | - | ಹಳಿಗೇರಾ ಗ್ರಾಮ. |

ಮುಖ್ಯ ವಿಚಾರಣೆಃ ಹಿ.ಸ.ಸ.ಅ. ರವರಿಂದಃ

ಸಾಕ್ಷಿಯು ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಗುನ್ಹಾ ಸ್ಥಳದ ಪಂಚನಾಮೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಗುರುತಿಸಲಾಯಿತು. ಕಳೆದ 8 ವರ್ಷಗಳ ಹಿಂದೆ ವಿದ್ಯಾಕಾಂಪ್ಲೆಕ್ಸ್ ಹಿಂದೆ ಸಹಿ ಮಾಡಿರುತ್ತೇನೆ. ಯಾವ ವಿಚಾರಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಸಹಿ ಮಾಡುವಾಗ ನನ್ನ ಜೊತೆಗೆ ಯಾರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಬೆಳಗ್ಗೆ 10 ಗಂಟೆಗೆ ನಾನು ಸಹಿಯನ್ನು ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ ಹಿರಿಯ ಸ.ಸ. ರವರಿಂದಃ

ದಿನಾಂಕಃ 27.11.2015 ರಂದು ಯಾದಗಿರಿ ನಗರದ ಶಿವನಗರ ಏರಿಯಾ ವಿದ್ಯಾ ಮಂಗಲ ಕಾರ್ಯಾಲಯದ ಹಿಂದುಗಡೆ ಇರುವ ದಿನೇಶಬಾನು ಶಾಹೀ ಬೀಲ್ಡಿಂಗ್ ನಲ್ಲಿ ಪಂಚರಾಗಿ ಪೊಲೀಸರು ನನ್ನನ್ನು ಕರೆದರು ಎಂದರೆ ಸರಿ. ಅದೇ ರೀತಿ ಆವಾಗ ಚಾಸಾ-3 ರವರು ಸಹ ಅಲ್ಲಿ ಬಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಅಲ್ಲಿ ಎ ಬಿ ಹೊಸಮನಿ ಎನ್ನುವವರು ಇದ್ದರು ಎಂದು

ನನಗೆ ಗೊತ್ತಿರುವುದಿಲ್ಲ. ಬ್ಲೂ ಸ್ಟಾರ್ ಮಹಾವಿದ್ಯಾಲಯದಲ್ಲಿ ಈ ಹಿಂದೆ ಕಲಿತ್ತಿದ್ದ ವಿದ್ಯಾರ್ಥಿಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಾತಿ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಅವರ ಮಹಾವಿದ್ಯಾಲಯದಲ್ಲಿ ಕಲಿತ್ತಿದ್ದ ವಿದ್ಯಾರ್ಥಿಗಳಹೆಸರಗಳನ್ನು ಸದರಿ ಜಾತಿ ಪ್ರಮಾಣ ಪತ್ರಗಳನ್ನು ನಮೂದಿಸಿ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ಆರೋಪಿತರು ತಯಾರಿಸಿ ಅವರ ಹೆಸರಿನಲ್ಲಿ ಸರಕಾರಿದಿಂದ ಶಿಷ್ಯ ವೇತನವನ್ನು ಪಡೆದು ಹಾಗೂ 10 ಜನ ವಿದ್ಯಾರ್ಥಿಗಳ ಹೆಸರಿನಲ್ಲಿ 2 ಮೂಲ ವರ್ಗಾವಣೆ ಪ್ರಮಾಣ ಪತ್ರಗಳನ್ನು ತಯಾರಿಸಿ ಸರಕಾರಕ್ಕೆ ಮತ್ತುಸಾರ್ವಜನಿಕರಿಗೆ ಮೋಸ ಮಾಡಿದ ಬಗ್ಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಯನ್ನು ಬೆಳಗ್ಗೆ 10 ಗಂಟೆಯಿಂದ 11 ಗಂಟೆಯ ವರೆಗೆ ತಯಾರಿಸಿ ನನಗೆ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮತ್ತು ಚಾಸಾ-3 ರವರಿಗೆ ಪಂಚನಾಮೆಯಲ್ಲಿ ಬರೆದ ವಿಷಯಗಳನ್ನು ನಮ್ಮಗೆ ಓದಿ ಹೇಳಿದ ನಂತರ ನಾವು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಡಿ.ವಿ. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.